ಸಾಕಾ?" ಎಂದು ಅಮ್ಮನನ್ನು ಬೈಯುತ್ತಲೇ ಕರುವಿನ ಹತ್ತಿರ ಹೋಗಿ ಜೋರಾಗಿ ಬೆನ್ನಿನ ಮೇಲೆ ಹೊಡೆದು ಕೆಚ್ಚಲಿನಿಂದ ಬಿಡಿಸಿ ಎಳೆದರು. ನಂತರ "ಹೋಗು, ಹಾಲು ಕರೀ ಹೋಗು, ಅದು ಹಾಲು ಕುಡಿಯೋದ್ನೇ ನೋಡ್ತಾ ನಿಲ್ಬೇಡ" ಎಂದು ಅತ್ತೆಯನ್ನು ನೋಡಿ ಕಿರುಚಿದರು. ಕರುವನ್ನು ಹಿಡಿದು ಅಲ್ಲಿ ನೆಟ್ಟಿದ್ದ ಗೂಟಕ್ಕೆ ಕಟ್ಟಿಹಾಕಿ "ತಿಂಗಳಿಗೆ ಎರಡು ತೊಟ್ಟಿ ಬದಲಾಯಿಸ್ತಾ ಇದ್ರೇ, ಹಾಲು ವ್ಯಾಪಾರ ಉದ್ಧಾರ ಆದಂಗೇ" ಎಂದು ಅಮ್ಮನನ್ನು ದುರುಗುಟ್ಟಿ ನೋಡಿ ಹಿಂತಿರುಗಿದರು.

ಒಡೆದು ಅಲ್ಲಲ್ಲಿ ಚದುರಿ ಹರಡಿಕೊಂಡಿದ್ದ ತೊಟ್ಟಿಯ ತುಂಡುಗಳನ್ನು ನಾನು ಹೋಗಿ ನೋಡಿದೆ. ಅಷ್ಟರಲ್ಲಿಯೇ ಬೇಲಿಯ ಪಕ್ಕದಿಂದ ಕೊಕ್ ಕೊಕ್ ಕೊಕ್ ಎಂದು ಶಬ್ದಮಾಡುತ್ತ ಕೋಳಿಗಳು ಅಲ್ಲಿಗೆ ಬಂದವು. ಮಣ್ಣಲ್ಲಿ ಮಣ್ಣಾಗಿ ಕಲೆತುಹೋಗಿದ್ದ ಹಿಂಡಿಯ ತುಣುಕುಗಳನ್ನು ಹೆಕ್ಕಿ ತೆಗೆದು ನುಂಗಿದವು. "ಅತ್ತೆ, ಪೊಂಗಲ್ ದಿನ ಕೊಂಡು ತಂದವಲ್ಲ, ಅದೇ ತಾನೇ ಇದು?" ಎಂದು ಸಂಶಯದಿಂದ ನಾನು ಕೇಳಿದೆ. ಮರುಕ್ಷಣವೇ "ಅಯ್ಯ, ದೊಡ್ಡ ಪೊಲೀಸಿನವನಂತೆ ತನಿಖೆಗೆ ಬಂದು ನಿಂತವ್ನೇ ನೋಡು, ಹೋಗೋ ಆ ಕಡೆ" ಎಂದು ಅಮ್ಮ ನನ್ನನ್ನು ಹೊಡೆದುಬಿಡುವಂತೆ ದುರುಗುಟ್ಟಿದಳು.

ಹಿಂತಿರುಗಿ ಬಂದು ಜಗುಲಿಯ ಮೇಲೆ ಕೂರಲು ಹೋದಾಗ, "ಏನೋ, ಹಾಲು ಕೊಡೋಕ್ಕೆ ಹೋದ ಹುಡುಗರು ಇನ್ನೂ ಬಂದಿಲ್ವಾ? ಮೇಷ್ಟ್ರ ಮನೇನಲ್ಲಿ ಐದು ಸೇರು ಹಾಲು ಬೇಕಂತ ನಿನ್ನೇನೇ ಹೇಳೋಗಿದ್ದಾರೆ. ಕೊಟ್ಟು ಕಳಿಸಬೇಕು, ಮರತೇ ಹೋಯ್ತು" ಎಂದು ಅಪ್ಪ ಬೇಸರಪಟ್ಟುಕೊಂಡರು. "ಛೇ, ಬರ್ತಾ ಬರ್ತಾ ಮರವು ಹೆಚ್ಚಾಯ್ತು" ಎಂದು ತನ್ನನ್ನು ತಾನೇ ಹಳಿದುಕೊಂಡರು. ಕೆಲವು ಕ್ಷಣಗಳ ನಂತರ "ಲೋ, ಆ ಬಕ್ಕೆಟ್ಟಲ್ಲಿ ದೊಡ್ಡ ಸೇರಿಂದ ಐದು ಸೇರು ಹಾಲು ಹಾಕ್ಕೊಂಡು ಹೋಗಿ ನೀನೇ ಕೊಟ್ಟು ಬಾರೋ. ಬೇಗನೆ ಹೋಗೋ. ಏನೋ ಅವರ ಮನೆಯಲ್ಲಿ ವಿಶೇಷ ಅಂತಾ ಹೇಳಿದ್ರು" ಎಂದರು. ಮರು ಮಾತಿಲ್ಲದೆ, ಬಕೆಟ್ಟಿನಲ್ಲಿ ಹಾಲನ್ನು ಅಳೆದು ಸುರಿದುಕೊಂಡು ಮೇಷ್ಟ್ರ ಮನೆಗೆ ಹೊರಟೆ.

ಹಿಂತಿರುಗಿ ಬರುವ ದಾರಿಯಲ್ಲಿ ದೇವಸ್ಥಾನದ ಹೊಸಿಲಲ್ಲಿ ನನ್ನನ್ನು ಒಬ್ಬರು ತಡೆದು ನಿಲ್ಲಿಸಿದರು. "ಇಲ್ಲಿ ಹಾಲಿನವರ ಮನೆ ಎಲ್ಲಿದೆ?" ಎಂದು ಕೇಳಿದರು. ನಾನು ಅವರನ್ನು ಮೇಲೆ ಕೆಳಗೆ ದಿಟ್ಟಿಸಿ ನೋಡಿದೆ. ಅವರ ಕಣ್ಣಲ್ಲಿ ಕೀಟಲೆ ಮಾಡುವ ಯಾವುದೇ ಗುರುತಿರಲಿಲ್ಲ ಎಂಬುದು ತಿಳಿಯಿತು. ಅವರು ಕೊಳಕಾದ ಪಂಚೆಯೊಂದನ್ನು ಉಟ್ಟಿದ್ದರು. ದೃಢವಾದ ಕಪ್ಪು ದೇಹ. ಹಲಗೆಯಂತೆ ಹರಡಿಕೊಂಡಿದ್ದ ಎದೆಯಲ್ಲಿ ಕೂದಲ ರಾಶಿ ಸುರುಳಿಸುರುಳಿಯಾಗಿದ್ದವು. ಕಪ್ಪು ಮೀಸೆಗೂ ಗಡ್ಡಕ್ಕೂ ಮಧ್ಯೆ ವೀಳ್ಯದ ರಸದಿಂದ ಕೆಂಪಾಗಿ ಸಿಡಿದ ತುಟಿಗಳು. ಯಾವುದೋ ಹಣ್ಣನ್ನು ಕುಯ್ದಿಟ್ಟಂತೆ ಇತ್ತು. ಬೆನ್ನಿನ ಮೇಲೆ ಒಂದು ದೊಡ್ಡ ಗೋಣಿಚೀಲ ನೇತುಬಿದ್ದಿತ್ತು. ದೀಪದ ಕಂಬದ ಕೆಳಗೆ ಮಲಗಿದ್ದ ಒಂದು ನಾಯಿ ತಲೆ ಎತ್ತಿ ಅವರನ್ನು ನೋಡಿ ಎಡೆಬಿಡದೆ ಬೊಗಳಿತು. "ಏಯ್" ಎಂದು ಅದನ್ನು ಗದರಿಸಿ, ಅವರನ್ನು "ನನ್ನ ಜತೆ ಬನ್ನಿ" ಎಂದು ಹೇಳಿದೆ.

ಕೊಟ್ಟಿಗೆಯ ಹತ್ತಿರ ಬಂದಾಗ ಅವರು ಹೊಸಿಲಿನಲ್ಲೇ ನಿಂತುಬಿಟ್ಟರು. ಗೋಣಿಚೀಲವನ್ನು ಮಡಚಿ ಕಾಲಿನ ಕೆಳಗಿಟ್ಟು, ಕೈಗಳನ್ನು ಮಡಚಿ ಕಟ್ಟಿಕೊಂಡರು. ಗೋಣಿಚೀಲವನ್ನು ಸುತ್ತಿ ಸುತ್ತಿ ಬಂದ ಒಂದು ಕೋಳಿಯನ್ನು "ಇಸ್... ಇಸ್... ಹೋಗು... ಹೋಗು..." ಎಂದು ಅವರು ಸಣ್ಣನೆ ಧ್ವನಿಯಲ್ಲಿ ಓಡಿಸಿದರು.

ಅವರನ್ನು ಕಣ್ಣಲ್ಲೇ ಅಳೆಯುತ್ತಾ "ಯಾರೋ ಅದು?" ಎಂದು ನನ್ನ ಬಳಿ ಅಪ್ಪ ಕೇಳಿದರು. "ಗೊತ್ತಿಲ್ಲಾಪ್ಪ, ಹಾಲು ಮಾರೋರ್ ಮನೆ ಎಲ್ಲೀಂತ ಕೇಳಿದ್ರಪ್ಪ. ಕರ್ಕೊಂಡು ಬಂದೇ" ಎಂದೆ ನಾನು.